ಸಾಕ್ಷಿಯನ್ನು ದಿನಾಂಕ: 14-10-2019 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲುಃ ಶ್ರೀಃ ವಿ.ಕೆ.ಎಂ , ಪ್ರತಿವಾದಿ ಪರ ವಕೀಲರಿಂದಃ

ನನ್ನ ವಕೀಲರಿಗೆ ಈ ದಾವೆಯನ್ನು ದಾಖಲಿಸುವ ಒಂದು ವರ್ಷದ ಮೊದಲು ಪ್ರತಿವಾದಿ ದಾವಾ ಆಸ್ತಿಗೆ ಅತಿಕ್ರಮಣವಾಗಿ ಪ್ರವೇಶಿಸಿದರು ಎನ್ನುವುದನ್ನು ಅನುಭವ ಕೊಟ್ಟಿದ್ದೇನೆ.. ನಾನು ನನ್ನ ನೋಟಿಸಿನಲ್ಲಿ ಹೇಳದೆ ಇರಲು ಕಾರಣವಿರಲಿಲ್ಲ. ಪ್ರತಿವಾದಿಯ ಸ್ವಾಧೀನದಲ್ಲಿ ಇರುವ ಜಾಗದ ಸುತ್ತಲೂ ಮುರುಕಲ್ಲು ಕಾಂಪೌಂಡ್ ಗೋಡೆ ಇದೆ ಎಂದರೆ ಸಾಕ್ಷಿ ನಮ್ಮ ಜಾಗವನ್ನು ಅತಿಕ್ರಮಣ ಮಾಡಿ ಕಟ್ಟಿದ್ದಾರೆ ಎನ್ನುತ್ತಾರೆ. ಕಾಂಪೌಂಡ್ ಗೋಡೆ ಇರುವ ಜಾಗದಲ್ಲಿ ಮೊದಲು ಮಣ್ಣಿನ ಅಗಳು ಇತ್ತು ಎಂದರೆ ಅಲ್ಲಿ ಮಣ್ಣಿನ ಅಗಳಲು ಇರಲಿಲ್ಲ ಎನ್ನುತ್ತಾರೆ. ಮಣ್ಣಿನ ಅಗಳು ಇದ್ದ ಕಡೆಗೆ ಪ್ರತಿವಾದಿ ಕಾಂಪೌಂಡ್ ಗೋಡೆಯನ್ನು ಕಟ್ಟಿದ್ದಾರೆ ಎಂದರೆ ಸಾಕ್ಷಿ, ಮೊದಲು ಅಲ್ಲಿ ಮರಗಳು ಇದ್ದವು , ಆ ಜಾಗದಲ್ಲಿ ಕಾಂಪೌಂಡ್ ಗೋಡೆ ಕಟ್ಟಿದ್ದಾರೆ ಎನ್ನುತ್ತಾರೆ. ಮರಳು ಇದ್ದ ಜಾಗದ ಪಶ್ಚಿಮ ಭಾಗದ ನಮ್ಮ ಸ್ವಾಧೀನದಲ್ಲಿ ಜಾಗ ಇದೆ , ಪೂರ್ವ ಭಾಗದಲ್ಲಿ ಪ್ರತಿವಾದಿಯರ ಸ್ವಾಧೀನದಲ್ಲಿ ಇರುವ ಜಾಗ ಇದೆ. ಪ್ರತಿವಾದಿಯರು ಸ್ವಾಧೀನದಲ್ಲಿ ಇರುವ ಜಾಗದಲ್ಲಿ ತೆಂಗಿನ ಮರಗಳು ಮತ್ತು ಅಡಿಕೆ ಮರಗಳು ಇವೆ ಎಂದರೆ ಸರಿ. ಕೆಲವು ತೆಂಗಿನ ಮರಗಳು ಮತ್ತು ಅಡಿಕೆ ಮರಗಳನ್ನು ತೆಗೆದು ಪ್ರತಿವಾದಿ ಮನೆ ಕಟ್ಟಿದ್ದಾರೆ . ಪ್ರತಿವಾದಿ ಸ್ವಾಧೀನದಲ್ಲಿ ಇರುವ ಜಾಗದಲ್ಲಿ ಮೊದಲು ಅವರ ತಾಯಿ ಸ್ವಾಧೀನದಲ್ಲಿ ಇದ್ದರು , ಈಗ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ.

ನಮ್ಮ ಆಸ್ತಿಯ ಗಡಿಗಳ ಬಗ್ಗೆ ನನಗೆ ಗೊತ್ತಿದೆ. ಸಾಕ್ಷಿ ಮುಂದುವರಿದು ನನಗೆ ಪೂರ್ವ - ಪಶ್ಚಿಮ ಯಾವ ಕಡೆ ಎನ್ನುವುದು ಗೊತ್ತಾಗವುದಿಲ್ಲ ಎನ್ನುತ್ತಾರೆ. ನನ್ನ ಅತ್ತೆ , ಪ್ರತಿವಾದಿ ಸ್ವಾಧೀನದಲ್ಲಿ ಇರುವ ಜಾಗವನ್ನು ಪ್ರಶ್ನಿಸಿ ತಕರಾರು ಮಾಡಿರುವುದಿಲ್ಲ. ನಮ್ಮ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಯ ಮಧ್ಯೆ 12 ಫೀಟ್ ಅಗಲ ರಸ್ತೆ ಇದೆ ಎನ್ನುವುದು ಸರಿಯಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದಾಗ ಸದರಿ ಫೋಟೋದಲ್ಲಿ ಇರುವ ಗೋಡೆ ಮತ್ತು ಪಕ್ಕದಲ್ಲಿ ಇರುವ ಜಾಗವನ್ನು ತನ್ನದೆಂದು ಗುರುತಿಸಿದ್ದರಿಂದ ,

ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಅವರ ಜಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ನಿಡಿ-1 ರಲ್ಲಿ ಕಾಣಿಸುತ್ತಿರುವ ರಸ್ತೆಯ ಜಾಗ ನಮ್ಮದೆಂದು ಮೊದಲು ನಮಗೆ ಗೊತ್ತಿರಲಿಲ್ಲ, ನನಗೆ ಗೊತ್ತಾದ ಕೂಡಲೇ ಸದರಿ ರಸ್ತೆಯನ್ನು ಬಂದ್ ಮಾಡಿ, ಪ್ರತಿವಾದಿಗೆ ಸದರಿ ಜಾಗದಲ್ಲಿ ಓಡಾಡಬೇಡಿ ಎಂದು ತಿಳಿಸಿದೆವು ಎನ್ನುತ್ತಾರೆ. ಮೊದಲು ನಮಗೆ ನಿಡಿ-1 ರಲ್ಲಿ ಕಾಣುವ ರಸ್ತೆಯು ನಮ್ಮ ಜಾಗವೆಂದು ಗೊತಿಲ್ಲದೆ ಇದ್ದುದ್ದರಿಂದ ಪ್ರತಿವಾದಿಯನ್ನು ಸದರಿ ರಸ್ತೆಯಲ್ಲಿ ಓಡಾಡಬೇಡಿ ಎಂದು ಹೇಳಲಿಲ್ಲ. ನಿಡಿ-1 ರಲ್ಲಿ ಕಾಣುತ್ತಿರುವ ಕಾಂಪೌಂಡ್ ಗೋಡೆ ನನ್ನ ಗಂಡ ಜೀವಂತ ಇರುವಾಗ ಅವರೇ ಹಾಕಿದ್ದು. ಅವರು ತೀರಿ ಹೋಗಿ 15 ವರ್ಷಗಳಾಗಿವೆ. ನನ್ನ ಗಂಡನಾಗಲೀ, ನನ್ನ ಅತ್ತೆಯಾಗಲೀ ನಿಡಿ-1 ರಲ್ಲಿ ಕಾಣುತ್ತಿರುವ ರಸ್ತೆಯನ್ನು ಪ್ರತಿವಾದಿ ಉಪಯೋಗಿಸದಂತೆ ತಡೆ ಮಾಡಲಿಲ್ಲ. ಈಗ ನಾನು ನೋಡುತ್ತಿರುವ ಫೋಟೋದಲ್ಲಿ ಕಾಣುತ್ತಿರುವ ಮನೆ ಮತ್ತು ಕಾಂಪೌಂಡ್ ಜಾಗ ಹಾಗೂ ಪ್ರತಿವಾದಿಯ ಜಾಗದಲ್ಲಿ ಇರುವ ಗೇಟ್ ಮತ್ತು ಆವರಣ ಗೋಡೆ ಕಾಣುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸ್ಪಷ್ಟತೆಗಾಗಿ ವಾದಿಯರ ಜಾಗವನ್ನು ನಿಡಿ-2(ಎ) ಎಂದು, ಪ್ರತಿವಾದಿಯರ ಜಾಗವನ್ನು ನಿಡಿ-2(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಫೋಟೋದಲ್ಲಿ ನಾವು ಕಟ್ಟಿರುವ ಕಾಂಪೌಂಡ್ ಗೋಡೆ ಕಂಡು ಬರುತ್ತದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ , ಅದನ್ನು ನಿಡಿ-3 ಎಂದು , ಕಾಂಪೌಂಡ್ ಗೋಡೆಯನ್ನು ನಿಡಿ-3(ಎ) ಎಂದು ಗುರುತಿಸಲಾಯಿತು. ನಿಡಿ-3 ರಲ್ಲಿ ಪ್ರತಿವಾದಿಯರ ಕಾಂಪೌಂಡ್ ಗೋಡೆಯ ಜಾಗವೂ ಸಹ ಕಾಣುತ್ತದೆ. ಸದರಿ ಜಾಗವನ್ನು ನಿಡಿ-3(ಬಿ) ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣುವ ರಸ್ತೆ ಯಾವ ಸರ್ವೆ ನಂಬರಿನಲ್ಲಿ ಹಾದು ಹೋಗುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನ್ನ ಸ್ಥಿರಾಸ್ತಿಯಲ್ಲಿ ಹಾದು ಹೋಗುತ್ತದೆ ಎನ್ನುತ್ತಾರೆ. (ವ್ಯಾಜ್ಯದ ಆಸ್ತಿ) . ಈ ವ್ಯಾಜ್ಯ ದಾಖಲಿಸುವಾಗ ನಿಡಿ-1 ರಲ್ಲಿ ಕಾಣುವ ರಸ್ತೆ ಬಗ್ಗೆ ನನಗೆ ಗೊತ್ತಿರಲಿಲ್ಲ .ಈ ವ್ಯಾಜ್ಯ ದಾಖಲಿಸಿದ ನಂತರ ರಸ್ತೆ ಜಾಗ ನಮ್ಮದೆಂದು ಗೊತ್ತಾಯಿತು, ಈ ವ್ಯಾಜ್ಯ ದಾಖಲಿಸುವ ಪೂರ್ವದಲ್ಲಿ ನಾನು ನಮ್ಮ ಜಾಗವನ್ನು ಅಳತೆ ಮಾಡಿಸಿರುವುದಿಲ್ಲ.

ನಮ್ಮ ಪರಿಸರದಲ್ಲಿ ನಾಲ್ಕು ಮನೆಗಳು ಇವೆ. ಉಳಿದ ಮನೆಗಳು ಸ್ವಲ್ಪ ದೂರದಲ್ಲಿ ಇದೆ. ಪ್ರತಿವಾದಿ ಹೇಳುವ ಹಾಗೆ ಆ ಪರಿಸರದಲ್ಲಿ 20 ರಿಂದ 25 ಮನೆಗಳು ಇಲ್ಲ. ಮೊದಲಿನಿಂದಲೂ ಪ್ರತಿವಾದಿ ಮತ್ತು 20 ಮನೆಯವರು ನಿಡಿ-1 ರಲ್ಲಿ ಇರುವ ರಸ್ತೆಯನ್ನು ಉಪಯೋಗಿಸುತ್ತಿದ್ದರು ಎಂದರೆ ಸಾಕ್ಷಿ ಸದರಿ ರಸ್ತೆಯನ್ನು ಉಪಯೋಗಿಸುವ ಅವಶ್ಯಕತೆ ಪ್ರತಿವಾದಿಗೆ ಇಲ್ಲ ಎನ್ನುತ್ತಾರೆ. ನಿಡಿ-1 ರಲ್ಲಿ ಕಾಣುವ ರಸ್ತೆಯ ವಿಷಯದಲ್ಲಿ ವರಪ್ರಸಾದ್ ಮತ್ತು ಖಲೀಲ್ ಎನ್ನುವವರು ನನ್ನ ವಿರುದ್ಧ ವ್ಯಾಜ್ಯ ಮಾಡಿ ಸದರಿ ದಾವೆಯಲ್ಲಿ ಮಧಂತರ ಆದೇಶವನ್ನು ಪಡೆದಿದ್ದಾರೆ ಎಂದರೆ ಸರಿ. ರಸ್ತೆಯ ಬಗ್ಗೆ ವ್ಯಾಜ್ಯದಲ್ಲಿ ಹೇಳದೇ ಇರಲು ಕಾರಣವೇನು ಎಂದರೆ ಸಾಕ್ಷಿ ಅಲ್ಲಿ ರಸ್ತೆ ಇಲ್ಲ ಎನ್ನುತ್ತಾರೆ. ನಾನು ನಮ್ಮ ಜಾಗವನ್ನು ಅಳತೆ ಮಾಡುವ ಮೊದಲು ಪ್ರತಿವಾದಿಗೆ ನೋಟೀಸು ಕೊಡಿಸಿದ್ದೆವು. ಅದರ ಬಗ್ಗೆ ನನ್ನ ಬಳಿ ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ಪ್ರತಿವಾದಿಯರಿಗೆ ಅವರ ಜಾಗ ಅವರಿಗೆ ಹೇಗೆ ಬಂತು ಎನ್ನುವುದರ ಬಗ್ಗೆ ನಾನು ಅನುಭವ ಮಾಡಿಕೊಳ್ಳಲಿಲ್ಲ. ಪ್ರತಿವಾದಿಯರಿಗೆ ಪಾಲುಪಟ್ಟಿಯ ಪ್ರಕಾರ ಅವರ ಜಾಗ ಅವರಿಗೆ ಬಂದಿರುವುದು ನನಗೆ ಗೊತ್ತಿಲ್ಲ. ನಾವು ಅಳತೆ ಮಾಡುವಾಗ ಪ್ರತಿವಾದಿಯ ದಾಖಲೆಗಳನ್ನು ನೋಡಿ ಅಳತೆ ಮಾಡಿದೆವು. ಆ ಸಮಯದಲ್ಲಿ ಪ್ರತಿವಾದಿ ಮತ್ತು ಅವರ ಮಕ್ಕಳು ಇದ್ದರು. ನಾನು ನಮ್ಮ ಆಸ್ತಿಯನ್ನು ಅಳತೆ ಮಾಡಿಸಿದಾಗ ಸರ್ವೇಯರ್ ಕೊಟ್ಟ ನಕ್ಷೆ ನಿಪಿ-6 ಆಗಿರುತ್ತದೆ. ನಿಪಿ-6 ರ ಪ್ರಕಾರ ನಾನು ಈ ವ್ಯಾಜ್ಯವನ್ನು ಮಾಡಿದ್ದೇನೆ. ಸರ್ವೆ ನಂ. 363/10 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ, ಸರ್ವೆ ನಂ. 363/3 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತೆಯವರು 2015 ರಲ್ಲಿ ತೀರಿದರು. ನನ್ನ ಅತ್ತೆಯವರು ನನಗೆ ವ್ಯವಸ್ಥಾ ಪತ್ರವನ್ನು 2014 ರಲ್ಲಿ ಮಾಡಿಕೊಟ್ಟರು. ನನ್ನ ಅತ್ತೆಯವರಿಗೆ ಅವರು ವ್ಯವಸ್ಥಾ ಪತ್ರದ ಮೂಲಕ ನನಗೆ ಬರೆದುಕೊಟ್ಟ ಆಸ್ತಿಯ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ. ನಿಪಿ-1 ಮತ್ತು ನಿಪಿ-2 ರ ಬಗ್ಗೆ ನಾನು ಅನುಭವ ಮಾಡಿಕೊಂಡಿದ್ದೇನೆ. ಪ್ರತಿವಾದಿಯರಿಗೆ ಪಾಲು ಪಟ್ಟಿಯ ಮೂಲಕ ಬಂದ ಆಸ್ತಿಯಲ್ಲಿ ಮನೆ ಕಟ್ಟಿದ್ದರೂ ಸಹ ನಮ್ಮ ಆಸ್ತಿಯನ್ನು ಅತಿಕ್ರಮಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪ್ರತಿವಾದಿ ಮನೆ ಕಟ್ಟಿ ಸುಮಾರು 7-8 ವರ್ಷಗಳಾಗಿರುತ್ತವೆ.

{ಮುಂದುವರಿದ ಪಾಟೀಸವಾಲಿಗಾಗಿ  ಸಮಯಾವಕಾಶ ನೀಡಿ ಮುಂದೂಡಲಾಯಿತು.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ  ಹೇಳಿ  ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ